# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1293 |
| ಸದಸ್ಯರ ಹೆಸರು | ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | 22-08-2025 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯಕ್ಕೆ ಪ್ರತಿವರ್ಷ ಅಗತ್ಯವಿರುವ ಯೂರಿಯಾ (ರಸಗೊಬ್ಬರ)ದ ಪ್ರಮಾಣವೆಷ್ಟು; ಈ ಗೊಬ್ಬರವನ್ನು ಯಾವ ಮೂಲಗಳಿಂದ ಸರ್ಕಾರವು ಶೇಖರಿಸುತ್ತದೆ; ಕೊರತೆಯಾಗುವ ಯೂರಿಯಾ (ರಸಗೊಬ್ಬರ) ಪ್ರಮಾಣವೆಷ್ಟು; (ಕಳೆದ ಮೂರು ವರ್ಷಗಳ ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯಕ್ಕೆ ಪ್ರತಿ ವರ್ಷ (ಮುಂಗಾರು/ ಹಿಂಗಾರು ಬೇಸಿಗೆ ಹಂಗಾಮು ಸೇರಿದಂತೆ) ಅಗತ್ಯವಿರುವ ಯೂರಿಯಾದ ಸರಾಸರಿ ಪ್ರಮಾಣ 17.34ಲಕ್ಷ ಮೆ.ಟನ್.<br><br>ಕೇಂದ್ರ ಸರ್ಕಾರದಿಂದ ಪ್ರತಿ ಮಾಹೆ ರಸಗೊಬ್ಬರ ತಯಾರಿಕಾ ಸಂಸ್ಥೆವಾರು ದೇಶೀಯ ಉತ್ಪಾದನೆ(Indigenous)/ ಆಮದು(import) ಯೂರಿಯಾವನ್ನು ಹಂಚಿಕೆ ಮಾಡಿ ರಾಜ್ಯಕ್ಕೆ ನೀಡಲಾಗುತ್ತದೆ. ತದನಂತರ ರಸಗೊಬ್ಬರ ತಯಾರಿಕಾ ಸಂಸ್ಥೆಯವರಿಂದ ನೇರವಾಗಿ ಪರವಾನಗಿ ಹೊಂದಿರುವ ಖಾಸಗಿ ಮಾರಾಟಗಾರರು ಮತ್ತು ಸಹಕಾರ ಸಂಘಗಳ ಮುಖಾಂತರ ರೈತರಿಗೆ ಮಾರಾಟ ಮಾಡಲಾಗುತ್ತಿದೆ.<br><br>ಕಳೆದ ಮೂರು ವರ್ಷಗಳಲ್ಲಿ ಯೂರಿಯಾ ರಸಗೊಬ್ಬರದ ಯಾವುದೇ ಕೊರತೆಯಾಗಿರುವುದಿಲ್ಲ.<br><br>ಕಳೆದ ಮೂರು ವರ್ಷಗಳಲ್ಲಿ ಯೂರಿಯಾ ರಸಗೊಬ್ಬರದ ಅಗತ್ಯತೆಯ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ಕೇಂದ್ರ ಸರ್ಕಾರವು ನಮ್ಮ ರಾಜ್ಯಕ್ಕೆ ಸರಬರಾಜು ಮಾಡುತ್ತಿರುವ ಯೂರಿಯಾ (ರಸಗೊಬ್ಬರ) ಪ್ರಮಾಣವೆಷ್ಟು; ಕೇಂದ್ರ ಸರ್ಕಾರವು ಯಾವ ಮಾನದಂಡಗಳಡಿ ರಾಜ್ಯಗಳಿಗೆ ಯೂರಿಯಾವನ್ನು (ರಸಗೊಬ್ಬರ) ಸರಬರಾಜು ಮಾಡುತ್ತದೆ ಮತ್ತು ಇದಕ್ಕೆ ವಿಧಿಸುತ್ತಿರುವ ದರವೆಷ್ಟು; (ಕಳೆದ 03 ವರ್ಷಗಳ ಸಂಪೂರ್ಣ ಮಾಹಿತಿ ನೀಡುವುದು) | 2025-26ನೇ ಸಾಲಿನ ಮುಂಗಾರು ಹಂಗಾಮಿಗೆ 12.95 ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರದ ಬೇಡಿಕೆಯನ್ನು ರಾಜ್ಯದಿಂದ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರದಿಂದ 11.17 ಲಕ್ಷ ಮೆ.ಟನ್ (ಏಪ್ರಿಲ್-2025 ರಿಂದ ಸೆಪ್ಟೆಂಬರ್-2025ರವರೆಗೆ) ಯೂರಿಯಾ ರಸಗೊಬ್ಬರವನ್ನು ಹಂಚಿಕೆ ಮಾಡಲಾಗಿರುತ್ತದೆ.<br><br>ಏಪ್ರಿಲ್ ಮಾಹೆಯಿಂದ ದಿನಾಂಕ 18.08.2025ರವರೆಗೆ ರಾಜ್ಯಕ್ಕೆ ಒಟ್ಟು 6.54 ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರವು ಸರಬರಾಜಾಗಿರುತ್ತದೆ (ಆರಂಭಿಕ ಶಿಲ್ಕು 3.46 ಲಕ್ಷ ಮೆ.ಟನ್ ಹೊರತುಪಡಿಸಿ).<br><br>ಹಂಗಾಮಿನ ಪೂರ್ವದಲ್ಲಿಯೇ ಜಿಲ್ಲೆಗಳಲ್ಲಿ ಆವರಿಸಬಹುದಾದ ಬೆಳೆಗಳ ವಿಸ್ತೀರ್ಣದ ಆಧಾರದ ಮೇಲೆ ರಸಗೊಬ್ಬರದ ಬೇಡಿಕೆಯನ್ನು ಅಂದಾಜಿಸಿ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಲಾಗುತ್ತದೆ. ಕೇಂದ್ರ ಸರ್ಕಾರದಿಂದ |

| | | |
|---|---|---|
| | | ಮಾಹೆವಾರು ಹಂಚಿಕೆ ಮಾಡಲಾಗುವ ವಿವಿಧ ರಸಗೊಬ್ಬರಗಳನ್ನು ಜಿಲ್ಲಾವಾರು ಬೇಡಿಕೆಗನುಗುಣವಾಗಿ ನಿಗಧಿಪಡಿಸಿ, ರಸಗೊಬ್ಬರ ತಯಾರಿಕಾ ಸಂಸ್ಥೆಯವರಿಂದ ನೇರವಾಗಿ ಪರವಾನಗಿ ಹೊಂದಿರುವ ಖಾಸಗಿ ಮಾರಾಟಗಾರರು ಹಾಗೂ ಸಹಕಾರ ಸಂಘಗಳ ಮೂಲಕ ರೈತರಿಗೆ ಮಾರಾಟ ಮಾಡಲಾಗುತ್ತಿದೆ.<br><br>ಕೇಂದ್ರ ಸರ್ಕಾರವು ಪ್ರತಿ 45 ಕೆ.ಜಿ ಚೀಲ ಯೂರಿಯಾ ರಸಗೊಬ್ಬರಕ್ಕೆ ರೂ. 266.5 ಗಳ ಗರಿಷ್ಠ ಮಾರಾಟ ದರವನ್ನು ನಿಗಧಿಪಡಿಸಿರುತ್ತದೆ. |
| ಇ) | ನಮ್ಮ ಸರ್ಕಾರದ ಬೇಡಿಕೆಗನುಗುಣವಾಗಿ ಕೇಂದ್ರ ಸರ್ಕಾರವು ಯೂರಿಯಾವನ್ನು (ರಸಗೊಬ್ಬರ) ಸರಬರಾಜು ಮಾಡುತ್ತಿದೆಯೇ; (ಕಳೆದ ಮೂರು ವರ್ಷಗಳ ಸಂಪೂರ್ಣ ಮಾಹಿತಿ ನೀಡುವುದು) | ಕಳೆದ ಮೂರು ಸಾಲಿನಲ್ಲಿ ಸರ್ಕಾರದ ಬೇಡಿಕೆಗನುಗುಣವಾಗಿ ಕೇಂದ್ರ ಸರ್ಕಾರವು ಯೂರಿಯಾ ರಸಗೊಬ್ಬರವನ್ನು ಸರಬರಾಜು ಮಾಡಿದ್ದು, ಯಾವುದೇ ಕೊರತೆ ಉಂಟಾಗಿರುವುದಿಲ್ಲ.<br><br>ಪ್ರಸ್ತುತ ಸಾಲಿನ ಮುಂಗಾರು ಹಂಗಾಮಿನಲ್ಲಿ ರಾಜ್ಯದ ಬೇಡಿಕೆಗನುಗುಣವಾಗಿ ಯೂರಿಯಾ ರಸಗೊಬ್ಬರವು ಸರಬರಾಜಾಗದ ಕಾರಣ ಕೆಲವು ಜಿಲ್ಲೆಗಳಲ್ಲಿ ಕೊರತೆಯಾಗಿರುತ್ತದೆ.<br><br>ಕಳೆದ ಮೂರು ವರ್ಷಗಳ ಯೂರಿಯಾ ರಸಗೊಬ್ಬರ ಸರಬರಾಜು ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |

ಸಂಖ್ಯೆ: AGRI/276/ACT/2025

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು

**ಅನುಬಂಧ- ಎಲ್.ಸಿ.ಕ್ಯೂ-1293**

**ಕಳೆದ ಮೂರು ಸಾಲಿನ ಯೂರಿಯಾ ರಸಗೊಬ್ಬರ ಬೇಡಿಕೆ/ಹಂಚಿಕೆ/ಸರಬರಾಜು ವಿವರ (ಲಕ್ಷ ಮೆ.ಟನ್ ಗಳಲ್ಲಿ)**

| ವರ್ಷ | ಕೇಂದ್ರಕ್ಕೆ ಸಲ್ಲಿಸಲಾದ ಬೇಡಿಕೆ | | | ಕೇಂದ್ರ ಸರ್ಕಾರದ ಹಂಚಿಕೆ | | | ಸರಬರಾಜು | | |
|---|---|---|---|---|---|---|---|---|---|
| | ಮುಂಗಾರು | ಹಿಂಗಾರು-ಬೇಸಿಗೆ | ಒಟ್ಟು | ಮುಂಗಾರು | ಹಿಂಗಾರು-ಬೇಸಿಗೆ | ಒಟ್ಟು | ಮುಂಗಾರು (ಆರಂಭಿಕ ಶಿಲ್ಕು ಒಳಗೊಂಡಂತೆ) | ಹಿಂಗಾರು-ಬೇಸಿಗೆ | ಒಟ್ಟು |
| **2022-23** | 10.50 | 7.76 | **18.26** | 10.50 | 6.70 | **17.20** | 13.08 | 9.05 | **22.13** |
| **2023-24** | 11.75 | 7.66 | **19.41** | 9.10 | 7.00 | **16.10** | 13.33 | 7.72 | **21.05** |
| **2024-25** | 11.54 | 7.23 | **18.77** | 10.75 | 6.50 | **17.25** | 15.13 | 7.50 | **22.63** |